ಅಥವಾ ಮಗುವಿಗೆ ಏನಾದರೂ ಒಳ್ಳೆಯದನ್ನೇ ಕೊಟ್ಟುಬಿಡಬಹುದಲ್ಲ... ಆದರೆ ಅದಕ್ಕಾಗಿ ಇನ್ನೆಷ್ಟು ಕಾಯಬೇಕೊ... ಈಗ ಅನಿಸಿದ್ದನ್ನು ಈಗಲೆ ಮಾಡಿಬಿಡಬೇಕು. ಮುಂದೆ ಮಗುವಿಗೆ ಕೊಟ್ಟರಾಯಿತು ಎನಿಸಿದಾಗ ಲಕೋಟೆಯೊಂದನ್ನು ತೆಗೆದಿಟ್ಟುಕೊಂಡೆ.

ಬಾಲನ್‌ನ ತರಕಾರಿಯ ಗಾಡಿ ಪ್ರತಿದಿನವೂ ಬರತೊಡಗಿತ್ತು. ಹಾಗೆಯೆ ಅವನ ಕರೆಯೂ ಓಡೋಡಿ ಬರುವಂತೆ ಮಾಡುತ್ತಿತ್ತು. ಮತ್ತೇನೂ ಶೋಧನೆ, ಪರಿಶೀಲನೆ, ಪ್ರಶ್ನೋತ್ತರಗಳು ಸಾಧ್ಯವಾಗುತ್ತಿರಲಿಲ್ಲ. ಅಥವಾ ಬೇಡವೆಂದು ಮನಸ್ಸು ಗಟ್ಟಿಮಾಡಿಕೊಂಡಿದ್ದೆ. ಎರಡು ಸಾವಿರ ರೂಪಾಯಿಗಳನ್ನು ಲಕೋಟೆಗೆ ಹಾಕಿ, ಸಮಯ ನೋಡಿ ಅವನಿಗಷ್ಟೇ ಕೇಳಿಸುವಂತೆ, 'ಇದು ಮದುವೆ ಉಡುಗೊರೆ... ನೀನು ಮತ್ತು ನಿನ್ನ ಹೆಂಡತಿ ಉಪಯೋಗಿಸಿಕೊಳ್ಳಿ,' ಎಂದು ಅವನ ಕೈಗೆ ಕೊಟ್ಟಾಗ ಅವನು ತೆಗೆದುಕೊಳ್ಳಲು ಹಿಂದೇಟು ಹಾಕಿದ್ದ. ಆದರೆ ನನ್ನ ಬಲವಂತಕ್ಕೆ ಮಣಿದು ಕವರನ್ನು ಜೇಬಿನಲ್ಲಿಟ್ಟುಕೊಂಡಿದ್ದ. ಎಷ್ಟೋ ವೇಳೆ ಮದುವೆಗೋ, ಮತ್ತೊಂದಕ್ಕೋ ಎಂದು ಎಲ್ಲೆಲ್ಲಿಗೋ ಹೋಗುತ್ತೇವೆ. ಎಷ್ಟೆಷ್ಟೋ ಖರ್ಚು ಮಾಡುತ್ತೇವೆ. ಹಾಗಿರುವಾಗ ಇದೇನೂ ದೊಡ್ಡ ಮೊತ್ತವಲ್ಲ ಎನಿಸಿತ್ತು. ಅವನ ಕುಟುಂಬದ ವಿಷಯಗಳು ಸರಿಯಾಗಿ ತಿಳಿಯದಿದ್ದರೂ ಪ್ರತಿದಿನವೂ ಅವನನ್ನು ನೋಡಲಾಗುತ್ತಿದೆ ಎಂಬುದೇ ಸಮಾಧಾನದ ಸಂಗತಿಯಾಗಿತ್ತು.

ಅದೊಂದು ಭಾನುವಾರ ಬೆಳಿಗ್ಗೆಯೇ ಬಾಲನ್ ತರಕಾರಿ ಗಾಡಿಯಿಲ್ಲದೆ ಹಾಗೆಯೇ ಮನೆಗೆ ಬಂದಿದ್ದ. ಇದುವರೆಗೂ ಅವನು ಹಾಗೆ ಬಂದಿದ್ದೇ ಇಲ್ಲ. 'ಇವತ್ತು ಗಾಡಿಯಿಲ್ಲದೆ ಒಬ್ಬನೇ ಬಂದಿದ್ದೀಯ... ಜೋರಾಗಿ ಮಳೆ ಬರತ್ತೋ ಹೇಗೆ?' ಎಂದು ತುಸು ತಮಾಷೆಯ ದನಿಯಲ್ಲಿ ವಿಚಾರಿಸಿಕೊಂಡಿದ್ದೆ. ಅದಕ್ಕವನು ನಗಲು ಯತ್ನಿಸುತ್ತಾ,

'ನೀವು ನನ್ನ ವಿಷಯ ಕೇಳಿದ್ರಿ ಅಮ್ಮಾವ್ರೆ... ನಾನೆ ಸರಿಯಾಗಿ ಹೇಳಲಿಲ್ಲ. ಅದೆಷ್ಟು ಅಕ್ಕರೆ ತೋರಿಸುತ್ತಿದ್ದಿರಿ. ಆಗಾಗ ದೊಡ್ಡ ಹಬ್ಬಗಳಲ್ಲಿ ಮಾಡಿದ ತಿಂಡಿ ಕೊಡ್ತಾ ಇದ್ದಿರಿ. ಶೀತ, ನೆಗಡಿ ಆಗಿದ್ರೆ ಏನೆಲ್ಲಾ ಔಷಧಿ ಹೇಳುತ್ತಿದ್ದಿರಿ. ಎಷ್ಟೆಲ್ಲ ಪ್ರೀತಿ ತೋರಿಸ್ತಿದ್ರಿ. ಆದರೆ ನಾನು ನಿಮಗೆ ಸರಿಯಾಗಿ ಮುಖ ಕೊಟ್ಟು ಮಾತನಾಡಲಿಲ್ಲ. ಅದಕ್ಕೆ ಮನಸ್ಸಿಗೆ ಹೆಂಗೆಂಗೋ ಆಯಿತು. ತಡೆಯಲಾರದೆ ಬಂದ್ಬಿಟ್ಟೆ.'

ಬಾಲನ್‌ನನ್ನೇ ದಿಟ್ಟಿಸಿದ್ದೆ ನಾನು. ಹಾಗಾದರೆ ಇವನಿಗೂ ನನ್ನ ಬಗ್ಗೆ ಇಂತಹ ಭಾವನೆಗಳಿವೆಯೆ... ವಿಷಯ ಹಂಚಿಕೊಳ್ಳಲೆಂದೇ ಬಂದಿದ್ದಾನೆಯೆ... ವ್ಯಾಪಾರಕ್ಕಿಂತ ಮಿಗಿಲಾದ ನಂಟು, ಆತ್ಮೀಯತೆ ನಮ್ಮಲ್ಲಿದೆಯಲ್ಲ ಎಂಬ ಭಾವವೆ ಹೃದಯಕ್ಕೆ ತಂಪೆನಿಸಿತ್ತು. ಹೃದಯ ಹೃದಯಗಳ ಅನುಬಂಧಕ್ಕೆ ಜಾತಿ–ಮತ, ಬಡವ–ಬಲ್ಲಿದ,ಸ್ತ್ರೀ–ಪುರುಷ ಹೀಗೆ ಯಾವುದೇ ಅಂತರವಿಲ್ಲ... ಎಲ್ಲವನ್ನೂ ಮೀರಿದ ಈ ಬಂಧನಕ್ಕೆ ಮಮತೆಯೆನ್ನುವುದೆ, ವಾತ್ಸಲ್ಯವೆನ್ನುವುದೆ... ಕಂಗಳಲ್ಲಿ ತುಂಬಿ ಬಂದ ನೀರನ್ನು ಪಕ್ಕಕ್ಕೆ ತಿರುಗಿ ಒರೆಸಿಕೊಂಡಿದ್ದೆ.

ಬಾಲನ್ ಮಾತನ್ನು ಮುಂದುವರೆಸಿದ್ದ. 'ಎಲ್ಲರೆದುರಿಗೆ ಹೇಳೋಕಾಗಲಿಲ್ಲ ಅಮ್ಮಾವ್ರೆ. ಲಲಿತ ಚೆನ್ನೈನಲ್ಲೇ ಇದ್ದಾಳೆ. ನಾನು ನಿಮಗೆ ಎಲ್ಲವನ್ನೂ ಹೇಳಿಬಿಡ್ತೀನಿ,' ಎಂದು ತಲೆ ಕೆಳಗೆ ಹಾಕಿ ನಿಟ್ಟುಸಿರುಗರೆದಿದ್ದ. ಅವನ ಈ ರೀತಿ ಯಾಕೋ ದುರಂತದ ಮುನ್ಸೂಚನೆಯೆಂಬಂತೆ ಕೆಡುಕೆನಿಸಿತ್ತು.

'ಲಲಿತಳಿಗೆ ಮೊದಲೆ ಅನ್ಯಾಯ ಆಗಿತ್ತು ಅಮ್ಮಾವ್ರೆ. ಅವಳು ಅದನ್ನೆಲ್ಲಾ ನನ್ನ ಹತ್ತಿರ ಮೊದಲೇ ಹೇಳಿಕೊಂಡಿದ್ದಳು. ಪಾಪ... ಅವಳು ಒಳ್ಳೆಯವಳೆ... ಅವಳನ್ನು ಪ್ರೀತಿಸುತ್ತಾ ಇದ್ದ